

ಆಹಾರ ಹುಡುಕಾಟದಲ್ಲಿ ತಲ್ಲೀನ ಜೋಡಿ ಬಣ್ಣದ ಕೊಕ್ಕರೆಗಳು



ಗೂಡಿನಲ್ಲಿ ಮರಿಗಳಿಗೆ ಕಾವು ಕೊಡುತ್ತಿರುವ 'ಪೇಂಟೆಂಡ್ ಸ್ಟಾರ್ಕ್'

ಪ್ರಾಪ್ತಿಯಾಗಿದೆ. ಜಿಲ್ಲೆಯ ರಂಗನತಿಟ್ಟು, ಹೇಮಗಿರಿ ಮತ್ತು ಗೆಂಡೇಹೊಸಹಳ್ಳಿಯ ಪರಿಸರಕ್ಕಿಂತ ಇದು ಸ್ವಲ್ಪ ಭಿನ್ನವಾಗಿದ್ದು, 'ಸಮುದಾಯ ಸಂರಕ್ಷಿತ' ಪ್ರದೇಶ ಎಂದು ಪರಿಗಣಿಸಲಾಗಿದೆ.

ಈ ಹೆಜ್ಜಾರ್ಲೆ ಮತ್ತು ಬಣ್ಣದ ಕೊಕ್ಕರೆಗಳು ಶ್ರೀಲಂಕಾ, ಬರ್ಮಾ, ಉತ್ತರ ಭಾರತದ ವಿವಿಧ ಪ್ರದೇಶಗಳಿಂದ ಇಲ್ಲಿಗೆ ವಲಸೆ ಬರುತ್ತವೆ. ಸ್ಥಳೀಯ ನಿವಾಸಿಗಳು ಪಕ್ಷಿಗಳ ಬಗ್ಗೆ ಅಪಾರ ಕಾಳಜಿ ಹೊಂದಿದ್ದು, ಅವುಗಳ ರಕ್ಷಣೆ ಮಾಡುತ್ತಿದ್ದಾರೆ. ಹಾಗೆಯೇ ಪಕ್ಷಿಗಳೂ ಗ್ರಾಮದ ಸೌಂದರ್ಯವನ್ನು ಹೆಚ್ಚಿಸಿ, ನಾಡಿನೆಲ್ಲೆಡೆ ಹೆಸರು ತಂದುಕೊಟ್ಟಿವೆ. ಇಲ್ಲಿನ 'ಚೆಂದುಳ್ಳಿ ಚೆಲುವೆ'ಯರನ್ನು ನೋಡಲು ಬರುವ ಪ್ರವಾಸಿಗರಿಗೆ ಪ್ರವೇಶ ಶುಲ್ಕವಿಲ್ಲ, ಯಾವುದೇ ನಿರ್ಬಂಧವೂ ಇಲ್ಲ.

ಹಕ್ಕಿಗಳ ಪಾಲಿಗೆ 'ಕೊಕ್ಕರೆ ಬೆಳ್ಳೂರು' ನಿಜಕ್ಕೂ ತವರೂರು. ಬಾಣಂತನಕ್ಕೆ ತವರಿಗೆ ಬರುವ ಹೆಣ್ಣುಮಗಳಂತೆ, ಈ ಊರಿಗೆ ಪ್ರತಿ ವರ್ಷ ಡಿಸೆಂಬರ್‌ಗೆ ಹೆಜ್ಜಾರ್ಲೆ (ಸ್ಪಾಟ್ ಬಿಲ್ಡ್ ಪೆಲಿಕಾನ್) ಮತ್ತು ಬಣ್ಣದ ಕೊಕ್ಕರೆ (ಪೇಂಟೆಡ್ ಸ್ಟಾರ್ಕ್) ವಲಸೆ ಬರುತ್ತವೆ. ಈ ಬೆಳ್ಳಕ್ಕಿಗಳು ಇಲ್ಲಿಯೇ ಗೂಡು ಕಟ್ಟಿ, ಮೊಟ್ಟೆಯಿಟ್ಟು, ಮರಿ ಮಾಡುತ್ತವೆ. ಬಾಣಂತನ ಮುಗಿಸಿಕೊಂಡು ಗಂಡನ ಮನೆಗೆ ತೆರಳುವ ಹೆಣ್ಣುಮಗಳಂತೆ, ಮಳೆಗಾಲ ಆರಂಭವಾಗುವ ಮುನ್ನ (ಜೂನ್) ಬಲಿತ ಮರಿಗಳೊಂದಿಗೆ ಸ್ವಸ್ಥಾನಕ್ಕೆ ಪಕ್ಷಿಗಳು ಹಾರಿ ಹೋಗುತ್ತವೆ.

## ಸಂತಾನೋತ್ಪತ್ತಿಯ ಸಂಭ್ರಮ

ಈ 'ಪ್ರಾಕೃತಿಕ ಪಕ್ಷಿಧಾಮ'ಕ್ಕೆ ಈಗ ನೀವು ಭೇಟಿ ನೀಡಿದರೆ, ಗ್ರಾಮದ ಮಧ್ಯಭಾಗದಲ್ಲಿರುವ ಹುಣಸೆ, ಆಲ, ಅರಳಿ ಮುಂತಾದ ಮರಗಳ ಮೇಲೆ ಬೀಡುಬಿಟ್ಟಿರುವ ನೂರಾರು ಸಂಖ್ಯೆಯ ಹೆಜ್ಜಾರ್ಲೆ ಮತ್ತು ಬಣ್ಣದ ಕೊಕ್ಕರೆಗಳು ಬಿರು ಬಿಸಿಲಲ್ಲೂ ಅರಳಿದ ಹೂಗಳಂತೆ ಕಂಗೊಳಿಸುತ್ತವೆ. ಸಂತಾನೋತ್ಪತ್ತಿಯ ಸಂಭ್ರಮದಲ್ಲಿರುವ ಈ ಪಕ್ಷಿಗಳ ಸ್ವಚ್ಛಂದದ ಹಾರಾಟ ನೋಡುವುದೇ ಒಂದು ಸೊಗಸು.

ಎಲೆ, ಕಡ್ಡಿ, ನಾರುಗಳನ್ನು ತಂದು ಮರಗಳ ಕೊಂಬೆಗಳ ಮೇಲೆ ಬೆಚ್ಚನೆಯ ಗೂಡುಗಳನ್ನು ಕಟ್ಟಿಕೊಂಡಿವೆ. ಗೂಡಿನಲ್ಲಿ 2 ರಿಂದ 3 ಮೊಟ್ಟೆಗಳನ್ನು ಇಟ್ಟಿವೆ. ನಸುಕಿನ ವೇಳೆಗೆ ಕೆರೆ ಕಟ್ಟೆಗಳತ್ತ ಹಾರಿ ಹೋಗುತ್ತವೆ. ಅಲ್ಲಿ ಕಾಣುವ ಮೀನು, ಕಪ್ಪೆ, ಸರೀಸೃಪ ಮತ್ತು ಜಲಚರಗಳನ್ನು ಬೇಟೆಯಾಡಿ, ತಮ್ಮ ಮರಿಗಳಿಗೆ ಕೊಕ್ಕಿನಿಂದ ಗುಟುಕು ನೀಡುತ್ತವೆ. ಅವುಗಳ ಕೊಕ್ಕಿನಿಂದ ಹೊರಡುವ ಟಕಟಕ ಶಬ್ದ, ರೆಕ್ಕೆಗಳನ್ನು ಬಡಿದಾಗ ಕೇಳಿಬರುವ ಪಟಪಟ ಧ್ವನಿ, ಕೊರಳೊಳಗಿಂದ ಕೇಳಿಬರುವ ಇಂಚರ ಎಲ್ಲವೂ ಪಕ್ಷಿಪ್ರಿಯರ ಪಾಲಿಗೆ ನೈಸರ್ಗಿಕ ಹಿನ್ನೆಲೆ ಸಂಗೀತ.

## ಆಹಾರ-ನೀರಿನ ಲಭ್ಯತೆ

ಆಹಾರದ ಅನ್ವೇಷಣೆ, ನೀರಿನ ಲಭ್ಯತೆ ಮತ್ತು ಜಾಗದ ಸುರಕ್ಷತೆ ಈ ಮೂರು ಅಂಶಗಳನ್ನು ಆಧರಿಸಿ ವಲಸೆ ಪಕ್ಷಿಗಳು ಬೀಡು ಬಿಡುತ್ತವೆ. ಶಿಂಷಾ ನದಿ ತೀರದಲ್ಲಿರುವ ಕೊಕ್ಕರೆ ಬೆಳ್ಳೂರಿನ ಸುತ್ತಮುತ್ತ ತೈಲೂರು ಕೆರೆ, ಸೂಳೆಕೆರೆ, ಮಾದರಹಳ್ಳಿ ಕೆರೆ, ದೊಡ್ಡರಸಿನಕೆರೆ, ಇಗ್ಗಲೂರು ಜಲಾಶಯ ಮುಂತಾದ ನೀರಿನ ತಾಣಗಳು ಇರುವುದರಿಂದ ಪಕ್ಷಿಗಳ ಸಂತಾನೋತ್ಪತ್ತಿಗೆ ಪ್ರಶಸ್ತ ತಾಣವಾಗಿದೆ.

ಬಣ್ಣದ ಕೊಕ್ಕರೆಗಳು ಉದ್ದವಾದ, ದಪ್ಪ ಹಳದಿ ಕೊಕ್ಕು ಮತ್ತು ಹಳದಿ ಮುಖವನ್ನು ಹೊಂದಿರುತ್ತವೆ. ಅವು ಬಾಲ ಗರಿಗಳ ಬಳಿ ಗುಲಾಬಿ ಬಣ್ಣದೊಂದಿಗೆ ಬಿಳಿ ಗರಿಗಳನ್ನು ಪ್ರದರ್ಶಿಸುತ್ತವೆ. ಕಪ್ಪು–ಬಿಳುಪಿನ ರೆಕ್ಕೆಗಳು ಮತ್ತು ನೀಳವಾದ ಕಾಲುಗಳನ್ನು ಹೊಂದಿವೆ. ಗುಂಪಿನಲ್ಲಿರುವ ದೊಡ್ಡ ಕೊಕ್ಕರೆಗಳನ್ನು ಸಂಗಾತಿಯನ್ನಾಗಿ ಹೆಣ್ಣು ಕೊಕ್ಕರೆಗಳು ಆರಿಸಿಕೊಳ್ಳುತ್ತವೆ.





ಆಹಾರದ ಅನ್ವೇಷಣೆಯಲ್ಲಿ ಬಣ್ಣದ ಕೊಕ್ಕರೆ